ದಿಃ 24.07.2026

**ಸಿ.ಸಿ. 1/2021, ಪಿ.ಡಬ್ಲೂ-8 ಹೆಸರುಃ ಲತಾ.ಕೆ.**

**ದಿಃ24-07-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಡಿ.ಎಂ.ಬಿ. ವಕೀಲರಿಂದಃ**

ವಿವಾದಿತ ಘಟನೆಯ ಕಾಲಕ್ಕೆ ಸಾರ್ವಜನಿಕರಿಗೆ ಬೆಳಗ್ಗೆ 6 ರಿಂದ 9 ಗಂಟೆಯವರೆಗೆ ಅಗತ್ಯ ವಸ್ತುಗಳನ್ನು ಖರೀದಿಸಲು ಸರ್ಕಾರದಿಂದ ಅನುಮತಿ ನೀಡಲಾಗಿತ್ತು ಎಂದರೆ ಸರಿ. ಸದರಿ ಅವಧಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲರೂ ನಮ್ಮ ಸಿಬ್ಬಂಧಿಯವರು ಆದ ಕಾರಣ ದಾಳಿಯ ಪೂರ್ವದಲ್ಲಿ ಕೋವಿಡ್ 19 ಪರೀಕ್ಷೆಯನ್ನು ಮಾಡಿಸಿರಲಿಲ್ಲ. ಚಾಸಾ. 2 ಮತ್ತು 3 ರವರಿಗೆ ಕೋವಿಡ್ 19 ಪರೀಕ್ಷೆ ಮಾಡಿಸಿದ್ದ ಕುರಿತು ನನಗೆ ಮಾಹಿತಿ ಇಲ್ಲ. ಸದರಿ ಅವಧಿಯಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ 9 ಗಂಟೆಯ ನಂತರದಲ್ಲಿ ಪುನಃ ಮರುದಿನ ಬೆಳಗ್ಗೆ 6 ಗಂಟೆಯವರೆಗೆ ಸಾರ್ವಜನಿಕವಾಗಿ ಸಾರ್ವಜನಿಕರು ಓಡಾಡುವಂತಿರಲಿಲ್ಲ ಎಂದರೆ ಸರಿ.

2. ನಮ್ಮ ಕಛೇರಿಯಲ್ಲಿ ಚಲನ ವಲನ ವಹಿ ಇದ್ದು, ಸದರಿ ರಿಜಿಸ್ಟರ್‌ನಲ್ಲಿ ಗಸ್ತು ಕರ್ತವ್ಯಕ್ಕೆ ಹೋಗುವ ಕುರಿತು ನಮೂದು ಮಾಡುತ್ತೇವೆ. ಸದರಿ ದಿನದಂದು ನಾನು ಗಸ್ತು ಕರ್ತವ್ಯದಲ್ಲಿ ಇದ್ದ ಕಾರಣ ಮತ್ತು ನಮ್ಮ ಇಲಾಖೆಯಲ್ಲಿ ಠಾಣಾ ಡೈರಿ ಇಲ್ಲದ ಕಾರಣ ಚಾಸಾ.1 ರವರು ನೀಡಿದ ಮಾಹಿತಿಯ ಕುರಿತು ಬರೆದಿಲ್ಲ. ಚಾಸಾ.9 ರವರು ಗಸ್ತು ಕರ್ತವ್ಯದ ಅವಧಿಯಲ್ಲಿ ನನ್ನ ಜೊತೆ ಇರಲಿಲ್ಲ. ನಾನು ಬೇರೆ ಕಡೆ ಗಸ್ತು ಮಾಡುತ್ತಿದ್ದೆನು, ಚಾಸಾ. 9 ರವರು ಬೇರೆ ಕಡೆ ಗಸ್ತು ಮಾಡುತ್ತಿದ್ದರು. ನಾನು ಸ್ಥಳಕ್ಕೆ ರಾತ್ರಿ 12.10 ಕ್ಕೆ ಹೋಗಿದ್ದು, ನಾನು ಸ್ಥಳಕ್ಕೆ ಹೋದಾಗ ಚಾಸಾ. 9 ಮತ್ತು 10 ರವರು ಸ್ಥಳದಲ್ಲಿ ಇದ್ದರು. ನಾನು ಒಳಗಡೆ ಹೋಗಿ ಪರಿಶೀಲನೆ ಮಾಡಿರುತ್ತೇನೆ. ಸದರಿ ಅವಧಿಯಲ್ಲಿ ಇಬ್ಬರು ವ್ಯಕ್ತಿಗಳು ಒಳಗಡೆ ಇರುವುದು ಕಂಡುಬಂದಿತ್ತು. ಅಲ್ಲಿ ಇದ್ದವರು ಮದ್ಯವನ್ನು ಅಕ್ರಮವಾಗಿ ಸಾಗಾಣಿಕೆ ಮಾಡಿರುವುದಾಗಿ ಹೇಳಿದರು. ಆಗ ನಾನು ಎಷ್ಟು ಪ್ರಮಾಣದಲ್ಲಿ ಸಾಗಾಣಿಕೆ ಮಾಡಲಾಗಿದೆ ಎಂದು ಪರಿಶೀಲನೆ ಮಾಡಿಲ್ಲ. ಸಾಕ್ಷಿ ಮುಂದುವರೆದು ನಂತರದಲ್ಲಿ ವರದಿಯನ್ನು ನೀಡಿರುತ್ತೇನೆ ಎಂದು ಹೇಳುತ್ತಾರೆ.

3. ನಾನು 02.07.2020 ರಂದು ವರದಿಯನ್ನು ನೀಡಿರುತ್ತೇನೆ. ದಿನಾಂಕ 21.03.2020 ರಂದು ನಮೂದಿಸಿರುವ ಅಂತಿಮ ಶಿಲ್ಕು 485.595 ಲೀ. ಮತ್ತು 1669.92 ಲೀ. ಬಿಯರ್ ಇರುತ್ತದೆ, ಲೆಕ್ಕ ಪುಸ್ತಕದ ದಾಸ್ತಾನು ಮತ್ತು ಭೌತಿಕ ದಾಸ್ತಾನಿನೊಂಧಿಗೆ ತಾಳೆಮಾಡಿ ನೋಡಲಾಗಿ 59.220 ಲೀ. ಮದ್ಯ ವ್ಯತ್ಯಾಸ

ಕಂಡುಬಂದಿತ್ತು. ಆ ಬಗ್ಗೆ ನಿಪಿ.12 ರಲ್ಲಿ ಉಲ್ಲೇಖ ಮಾಡಿರುತ್ತೇನೆ. ನಾನು ದಿ.17.06.2020 ರಂದು ಬೌತಿಕ ಪರೀಕ್ಷೆಯನ್ನು ಮಾಡಿರುತ್ತೇನೆ. ನಾನು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಮದ್ಯದ ಮಾಲನ್ನು ನೋಡಿಲ್ಲ. ಚಾಸಾ. 1 ರವರು ಅಲ್ಲಿ ಇದ್ದ ವ್ಯಕ್ತಿಗಳನ್ನು ದಸ್ತಗಿರಿ ಮಾಡಿದ್ದು, ಹೊಡೆದ ಬೀಗಗಳನ್ನು ತೆಗೆದುಕೊಂಡರು. ಸೀಲು ಹಾಕಿದ್ದ ಬೀಗವನ್ನು ಹೊಡೆದುಹಾಕಿದ್ದು, ಹೊಡೆದು ಹಾಕಿದ್ದ ಬೀಗವನ್ನು ಚಾಸಾ. 1 ರವರು ಅಮಾನತ್ತುಪಡಿಸಿಕೊಂಡರು.

4. 3 ನೇ ಆರೋಪಿತರು ನಾನು ಮತ್ತು 2 ನೇ ಆರೋಪಿ ಮನೆಯಲ್ಲಿದ್ದಾಗ, 1 ನೇ ಆರೋಪಿ ದೂರವಾಣಿ ಕರೆ ಮೂಲಕ ಮದ್ಯ ಬೇಕು, ಮದ್ಯದ ಅಂಗಡಿಯ ಬೀಗವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು, ಆಗ 3 ನೇ ಆರೋಪಿ ನಮ್ಮ ಮಾಲೀಕರ ಬಳಿ ಮಾತನಾಡಬೇಕು ಎಂದು ಹೇಳಿದಾಗ, 1 ನೇ ಆರೋಪಿ ತಾನು ಈಗಾಗಲೇ ನಿಮ್ಮ ಮಾಲೀಕರ ಬಳಿ ಮಾತನಾಡಿದ್ದು, ಬೀಗ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದು, ಹಾಗಾಗಿ 2 ಮತ್ತು 3 ನೇ ಆರೋಪಿತರು ಬೀಗ ತೆಗೆದುಕೊಂಡು ಬಂದೆವು ಎಂದು ಚಾಸಾ.1 ರವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಚಾಸಾ. 1 ರವರಿಗೆ ಕಾರಿನ ಮೂಲಕ ಅಕ್ರಮವಾಗಿ ಮದ್ಯವನ್ನು ಸಾಗಾಟ ಮಾಡಿರುವುದಾಗಿ ತಿಳಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ. 1 ರವರು ಸ್ಥಳದಲ್ಲಿ ಓಡಾಡುವ ವಿಚಾರ ತಿಳಿದು ಕಾರನ್ನು ತೆಗೆದುಕೊಂಡು ಹೋಗಿರುತ್ತಾರೆಂದು, 3 ನೇ ಆರೋಪಿ ಚಾಸಾ. 1 ರವರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ. 1 ರವರು ಮದ್ಯದ ಅಂಗಡಿಗೆ ಯಾವ ಕಂಪನಿಯ ಬೀಗವನ್ನು ಹಾಕಿದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಮಹಜರನ್ನು ಮತ್ತು ನಕ್ಷೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ.

5. ನಕ್ಷೆಯಲ್ಲಿ ಅಂಗಡಿ ಮಳಿಗೆಗಳ ಕುರಿತು ಮಾತ್ರ ಉಲ್ಲೇಖ ಇದೆ, ಬೀಗಗಳು ಮತ್ತು ಅಲ್ಲಿ ಇದ್ದ ವ್ಯಕ್ತಿಗಳ ಕುರಿತು ಉಲ್ಲೇಖ ಇಲ್ಲ. ನಿಪಿ.11 ಮತ್ತು 12 ರ ದಾಖಲಾತಿಗಳನ್ನು ಈ ಪ್ರಕರಣದ ಸಲುವಾಗಿ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ವಿವಾದಿತ ದಿನದಂದು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಸ ಮಕ್ಷಮ ಯಾವುದೇ ಮಹಜರನ್ನು ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ

ದಿ: 24.07.2026

ಸರಿಯಲ್ಲ. ನಾನು ತನಿಖಾಧಿಕಾರಿಗಳ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ,**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.